# ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆ

## ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಶಿಕಾರಿಪುರ.

## ಜಾಗತೀಕರಣ.

- ಉದಾರೀಕರಣ,ಜಾಗತೀಕರಣ ಹಾಗೂ ಖಾಸಗೀಕರಣ ಈ ನೀತಿಗಳು ಆರ್ಥಿಕತೆಯ ಪ್ರತಿಯೊಂದು ಕ್ಷೇತ್ರದಲ್ಲೂ ವಿವಿಧ ಅವಕಾಶಗಳನ್ನು,ಹಾಗೂ ಸವಾಲಗಳನ್ನು ಸೃಷ್ಟಿಸಿದೆಯಲ್ಲದೆ ಇದರೊಂದಿಗೆ ವಿಶ್ವ ವ್ಯಾಪಾರ ಸಂಸ್ಥೆ ಸ್ಥಾಪನೆ ಮತ್ತು ಸೇವೆಗಳು ವಿಶ್ವದಲ್ಲಿ ಬಹಳಷ್ಟ ಬದಲಾವಣೆಗಳನ್ನು ತಂದಿದೆ ಭಾರತ ಜಾಗತಿಕ ಮಟ್ಟ ದಲ್ಲಿ ಪಡೆಯಬೇಕೆಂದರೆ ಅದರ ಶಿಕ್ಷಣ ವ್ಯವಸ್ಥೆ ಹೆಚ್ಚು ಸ್ಪರ್ದಾತ್ಮಕವಾಗಿರಬೇಕು.
- **ಜಾಗತೀಕರಣದ ವ್ಯಾಖ್ಯೆಗಳು**

  **ಸಮಾಜಶಾಸ್ತ್ರದ ನಿಘಂಟು** :–ಜಾಗತೀಕರಣವೊಂದು ಪ್ರಕ್ರಿಯೆಯಾಗಿದ್ದು ಇದರ ಪರಿಣಾಮವಾಗಿ,' ಸಮಾಜಗಳಲ್ಲಿನ ಜನರ ಜೀವನವು ರಾಜಕೀಯ,ಆರ್ಥಿಕ,ವಾಣಿಜ್ಯ,ವ್ಯಾಪಾರ,ಕಲೆ,ಸಂಗೀತ,ಶಿಕ್ಷಣ,ಹೀಗೆ ಹತ್ತಾತರು ಕ್ಷೇತ್ರಗಳಲ್ಲಿ ಅಂತರಾಷ್ಟ್ರೀಯ ಪ್ರಭಾವಗಳಿಗೆ ಒಳಗಾಗುವುದು".

- **ಅಂತರಾಷ್ಟ್ರೀಯ ಹಣಕಾಸು ನಿಧಿ**:–"ದೇಶದ ಗಡಿಯಾಚೆ ವಿಶ್ವವ್ಯಾಪಿ ವಸ್ತುಗಳು ಮತ್ತು ಸೇವೆಗಳ ವಿನಿಮಯ ಅಂತರಾಷ್ಟ್ರೀಯ ಬಂಡವಾಳ ಹೂಡಿಕೆ,ಹಾಗೂ ತಂತ್ರಜ್ಞಾನ ಶೀಘ್ರ ಹರಡುವಿಕೆಯಿಂದಾಗಿ ಧೇಶ ದೇಶಗಳ ನಡುವೆ ಆರ್ಥಿಕವಾಗಿ ಪರಸ್ಪರಾವಲಂಬನೆಯ ಬೆಳವಣಿಗೆಯನ್ನುಂಟು ಮಾಡುವುದೇ ಜಾಗತೀಕರಣ".

## ಜಾಗತೀಕರಣದಿಂದಾಗುವ ಅನುಕೂಲಗಳು.

- ವಸುದೈವ ಕುಟುಂಬಕಂ ಎಂಬ ಭಾವನೆಯನ್ನು ಎಲ್ಲರಲ್ಲೂ ಮೂಡಿಸುವುದು.
- ಅಭಿವೃದ್ದಿ ಹೊಂದಿದ ದೇಶದಿಂದ ಅಭಿವೃದ್ದಿ ಹೊಂದುತ್ತಿರುವ ದೇಶಕ್ಕೆ ತಂತ್ರಜ್ಞಾನ ಪಸರಿಸುವುದು.
- ಅಂತರಾಷ್ಟ್ರೀಯ ವ್ಯಾಪಾರ ವಾಣಿಜ್ಯ ಉತ್ತಮಗೊಳಿಸಸುವುದು.
- ಉದ್ಯೋಗವಕಾಶಗಳು ಹೆಚ್ಚುವವು.
- ದೇಶ–ದೇಶಗಳ ನಡುವೆ ಶೈಕ್ಷಣಿಕ ,ಸಾಂಸ್ಕ್ರತಿಕ,ಮತ್ತು ಆರ್ಥಿಕ ವಿನಿಮಯಕ್ಕೆ ದಾರಿಮಾಡಿಕೊಡುವುದು.

### ಅನಾನುಕೂಲಗಳು.

- ಧೇಶೀಯ ವಸ್ತು ಉತ್ಪಾದನೆ ಕುಂಠಿತಗೊಳ್ಳುವುದು.
- ಉದ್ಯೋಗವಕಾಶಗಳು ಕಡಿಮೆಯಾಗುವವು.
- ಬಡವ ಮತ್ತು ಶ್ರೀಮಂತರ ನಡುವಿನ ಕಂದಕ ಹೆಚ್ಚಾಗುವುದು.
- ವಿದೇಶೀ ವಸ್ತುಗಳ ಜೊತೆ ದೇಶೀಯ ವಸ್ತುಗಳು ಪೈಪೋಟಿ ನೆಡೆಸಲಾರವು.
- ತಲಾ ವರಮಾನ ಕಡಿಮೆಯಾಗುವವು .
- ಬಂಡವಾಳ ಹೂಡಿಕೆದಾರರು ಕಡಿಮೆಯಾಗುವವು.

## ಜಾಗತೀಕರಣದಿಂದಾಗಿ ಶಿಕ್ಷಣ ಕ್ಷೇತ್ರದಲ್ಲಾಗುವ ಬದಲಾವಣೆಗಳು.

- ಶಿಕ್ಷಣವನ್ನು ರಾಷ್ಟ್ರೀಯ ಅಭಿವೃದ್ದಿ ಅಂತರಾಷ್ಟ್ರೀಯ ತಿಳುವಳಿಕೆಯನ್ನು ಉತ್ತೇಜಿಸುವ ಸಾಧನವೆಂದು ಪರಿಗಣಿಸಲಾಗಿದೆ.
- ರಾಷ್ಟ್ರೀಯ ಶಿಕ್ಷಣದಿಂದ :– ಜಾಗತಿಕ ಶಿಕ್ಷಣದವರೆಗೆ.
- ರಾಜ್ಯನಿಯಂತ್ರಣ ವ್ಯವಸ್ಥೆಯಿಂದ :–ಮುಕ್ತ ಮಾರುಕಟ್ಟೆ ಆರ್ಥಿಕತೆಯೆಟೆಗೆ.
- ಸಾಮಾನ್ಯ ಶಿಕ್ಷಣಣದಿಂದ:– ಬೇಡಿಕೆ ಶಿಕ್ಷಣದವರೆಗೆ.

  ಒಂದು ಬಾರಿ ಶಿಕ್ಷಣದಿಂದ:–ಜೀವನಪರ್ಯಂತ ಶಿಕ್ಷಣದವರೆಗೆ.

### ಶಿಕ್ಷಣದಲ್ಲಿ ಜಾಗತೀಕರಣ 4 ಮಾರ್ಗಗಳಲ್ಲಿ ನೆಡೆಯುತ್ತದೆ.

- ವೀದೇಶಿ ನೆಲದಲ್ಲಿ ಆ ರಾಷ್ಟ್ರದ ಶಿಕ್ಷಣ ಸಂಸ್ಥೆಗಳೊಡನೆ ಒಪ್ಪಂದ ಮಾಡಿಕೊಂಡು ತಾವು ಇಚ್ಚಿಸುವ ಶಿಕ್ಷಣ ನೀಡುವುದು.
- ವಿದೇಶಿ ವಿಶ್ವವಿದ್ಯಾನಿಲಯಗಳು ತಮ್ಮ ಅದ್ಯಯನ ಕೇಂದ್ರಗಳನ್ನು ಸ್ಥಾಪಿಸಿ ಶಿಕ್ಷಣ ನೀಡುವುದು.
- ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರದಲ್ಲಿ ಸರ್ಕಾರದ ಪರವಾಗಿ ಕೇಂದ್ರಗಳನ್ನು ಸ್ಥಾಪಿಸಿ ಶಿಕ್ಷಣನೀಡಿ ಅಗತ್ಯ ಮಾಹಿತಿ ನೀಡುವುದು.
- ಅಂತರ್ಜಾಲಗಳು ಹಾಗು ತಾಂತ್ರಿಕತೆ ಬಳಸಿಕೊಂಡು ಭೋದನೆ ಮಾಡುವುದು.

## ಶಿಕ್ಷಣ ಜಾಗತೀಕರಣದಿಂದಾಗುವ ಅನುಕೂಲಗಳು

- ಶೈಕ್ಷಣಿಕ:– ಜಾಗತೀಕರಣದ ಪರಿಣಾಮವಾಗಿ ಮಾಹಿತಿ ಮತ್ತು ಜ್ಞಾನ ರಾಷ್ಟ್ರದಿಂದ ರಾಷ್ಟ್ರಕ್ಕೆ ವರ್ಗಾವಣೆಯಾಗುತ್ತದೆ.
- ವೃತ್ತಿಪರ :–ಸಮಾಜದ ಆರ್ಥಿಕಭಿವೃದ್ದಿಗೆ ಪೂರಕವಾದ ಮಾನವ ಸಂಪನ್ಮೂಲದ ಬಗ್ಗೆ ಅಗತ್ಯ ಮಾಹಿತಿ ನೀಡುವುದು.
- ಸಾಮಾಜಿಕವಾಗಿ:– ಒಬ್ಬ ವಿದ್ಯಾರ್ಥಿಯನ್ನು ಕಲಿಕಾರ್ಥಿಯಾಗಿ,ಚಿಂತನಾಕಾರರನ್ನಾಗಿ ಮಾಡುವುದು.

### ಅನಾನುಕೂಲಗಳು.

- ಬಡರಾಷ್ಟ್ರಗಳು ಮತ್ತು ಅಭಿವೃದ್ದಿ ಹೊಂದಿದ ರಾಷ್ಟ್ರಗಳ ಮದ್ಯೆ ಅಸಮಾನತೆ ಉಂಟಾಗುತ್ತದೆ.
- ಅಂತರ್ಜಾಲದ ಮೂಲಕ ಶಿಕ್ಷಣ ನೀಡುವಿಕೆಯಲ್ಲಿನ ಸಮಸ್ಯೆ
- ಶಿಕ್ಷಣ ಸಂಸ್ಥೆಗಳು ವ್ಯಾಪಾರಿ ಸಂಸ್ಥೆಗಳಾಗಿ ಮಾರ್ಪಾಡಾಗುವವು,.
- ಬಡ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುವರು.
- ಆನರಲ್ಲಿ ಮೌಲ್ಯಗಳ ಪ್ರಮಾಣ ಕುಂಠಿತಗೊಳ್ಳುವುದು.

## ಭಾರತದಲ್ಲಿ ಶಿಕ್ಷಣದ ಜಾಗತೀಕರಣ.

- ನಮ್ಮ ಶಿಕ್ಷಣ ಸಂಸ್ಥೆಗಳು ದೇಶದ ಆರ್ಥಿಕ ಮತ್ತು ತಾಂತ್ರಿಕ ಅಭಿವೃದ್ದಿಯ ಅಂಗಗಳಾಗಬೇಕು.
- ವಿದ್ಯಾರ್ಥಿಗಳ ಬೇಡಿಕೆ ಮತ್ತು ಅಭಿಕ್ಷಮತೆಗಳಿಗನುಸಾರವಾದ ಶೈಕ್ಷಣಿಕ ಕಾರ್ಯಕ್ರಮದ ರೂಪಣೆ.
- ಶಿಕ್ಷಣ ಸಂಸ್ಥೆಗಳಲ್ಲಿ ಸಂಶೋಧನೆ ಅಳವಡಿಕೆ
- ಅಂತರಾಷ್ಟ್ರೀಯ ಹಾಗೂ ತಾಂತ್ರಿಕ ಪ್ರಗತಿ ಸ್ವೀಕರಿಸುವುದರೊಂದಿಗೆ ನಮ್ಮ ಸಾಮಾಜಿಕ ಪರಂಪರೆ ಉಳಿಸಿಕೊಳ್ಳುವುದು'
- ಭಾರತದಲ್ಲು ಆಂಗ್ಲ ಮಾದ್ಯಮಗಳ ಸ್ಥಾಪನೆ ಮಾಡುವುದು.

### ಶಿಕ್ಷಣದ ಮೇಲೆ ಜಾಗತೀಕರಣದ ಪ್ರಭಾವ.

- ಆರ್ಥಿಕ ಸುಧಾರಣೆ ಮತ್ತು ಆರ್ಥಿಕ ಜಾಗತೀಕರಣದ ಮೇಲೆ ನೇರ ಪರಿಣಾಮ ಬೀರುವುದು.
- ಏಕಕಾಲಕ್ಕೆ ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿನ ಕೋರ್ಸ್‌ಗಳನ್ನು ಭಾರತದವಿದ್ಯಾರ್ಥಿಗಳಿಗೆ ನೀಡುವುದು.
- ಆಂಗ್ಲ ಮಾದ್ಯಮಗಳಿಂದ ಸ್ಥಳೀಯ ಭಾಷೆ ಮೂಲೆಗುಂಪಾಗುವುದು.
- ಖಾಸಗೀಕರಣಕ್ಕೆ ಒತ್ತು ನೀಡುವುದು.
- ಉದ್ಯೋಗವಕಾಶಗಳಿಗೆ ಪೈಪೋಟಿ ನೀಡುವುದು.
- ಪ್ರತಿಭೆ ಇರುವವರಿಗೆ ಆಧ್ಯತೆ ಅಧಿಕಗೊಳ್ಳುವುದು.

## ಶಿಕ್ಷಣದ ಜಾಗತೀಕರಣದ ಭವಿಷ್ಯದ ಗುಣಗಳು.

- ಅಣ್ವಸ್ತ್ರಗಳನ್ನು ಎಚ್ಚರಿಕೆಯಿಂದ ಬಳಸುವುದು.
- ವ್ಯಕ್ತಿಗಳು ಒಂದು ರಾಷ್ಟ್ರದ ಆಸ್ತಿಯಾಗುವಂತಹ ವ್ಯಕ್ತಿತ್ವ ರೂಪಿಸುವುದು.
- ಸ್ವಬಾಭಾವಿಕ ಸಂಪನ್ಮೂಲಗಳನ್ನು ರಕ್ಷಿಸಿಕೊಳ್ಳುವ ದೋರಣೆ ಬೆಳೆಸುವುದು./
- ಪ್ರತಿಯೊಬ್ಬ ವ್ಯಕ್ತಿಯೂ ಸಮಾಜಕ್ಕೆ ಉತ್ತ್ಮ ಕೊಡುಗೆ ನೀಡುವ ಶಿಕ್ಷಣ ನೀಡಬೇಕು.
- ಮಾನವೀಯ ಮೌಲ್ಯಗಳನ್ನು ಬೆಳೆಸುವುದು.
- ವಿಶ್ವ ಪೌರತ್ವ  ಗುಣ ಬೆಳೆಸುವುದು.

# ಧನ್ಯವಾಧಗಳು